ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ:ಸಿ7(8)ಆರ್.ಟಿ.ಇ.ಪ್ರ.ಪ್ರ 01/18-19/2017-18 ದಿನಾಂಕ: 26.04.2018

**ವಿಶೇಷ ಗಮನಕ್ಕಾಗಿ**

## ಸುತ್ತೋಲೆ

ವಿಷಯ: 2018-19 ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಿರುವ ಬಗ್ಗೆ

ಉಲ್ಲೇಖ: ಆರ್.ಟಿ.ಇ ಕಾಯ್ದೆಯಡಿ ಅನ್ ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳ ಹಂಚಿಕೆ ಪ್ರಕ್ರಿಯೆ ದಿನಾಂಕ: 20.04.2018

*********

2018-19 ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ದಿನಾಂಕ: 20.04.2018 ರಂದು ಅನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ. ಸೀಟು ಹಂಚಿಕೆಯಾದ ಪ್ರತಿ ಮಗುವಿನ ಪೋಷಕರ ಮೊಬೈಲ್ ಸಂಖ್ಯೆಗೆ ದಿನಾಂಕ:20.04.2018 ಹಾಗೂ 21.04.2018 ರಂದು ಪ್ರತಿದಿನ 04 ಬಾರಿ ಕನ್ನಡ ಹಾಗೂ ಆಂಗ್ಲ ಬಾಷೆಗಳಲ್ಲಿ ಎಸ್.ಎಂ.ಎಸ್ ಕಳುಹಿಸಲಾಗಿದೆ.

**ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಉಪನಿರ್ದೇಶಕರು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ನಿರ್ವಹಿಸಬೇಕಾದ ಕ್ರಮಗಳು:**

- ಆರ್.ಟಿ.ಇ. ಸೀಟು ಹಂಚಿಕೆಯಾಗಿರುವ ಸಂಸ್ಥೆಯವರು ತಮ್ಮ ಶಾಲೆಗೆ ಹಂಚಿಕೆಯಾಗಿರುವ ಎಲ್ಲಾ ಮಕ್ಕಳನ್ನು ದಾಖಲು ಮಾಡಲು ಕ್ರಮ ಕೈಗೊಳ್ಳುವಂತೆ ಸೂಕ್ತ ಸುತ್ತೋಲೆ ಹೊರಡಿಸುವುದು.
- ಆಯ್ಕೆಯಾದ ಮಗುವಿನ ಪೋಷಕರು ಸೀಟು ಹಂಚಿಕೆಯಾದ ಪ್ರತಿಯ ಪ್ರಿಂಟ್ ಪಡೆದುಕೊಂಡು, ಈಗಾಗಲೇ ಆರ್.ಟಿ.ಇ ಅರ್ಜಿಯೊಂದಿಗೆ ನೀಡಿದ ಮೂಲ ಆಧಾರ್ ಕಾರ್ಡ್‌ನೊಂದಿಗೆ ಆಯ್ಕೆಯಾದ ಶಾಲೆಗೆ ಸಂಪರ್ಕಿಸಿ ಮಗುವನ್ನು ದಾಖಲೆ ಮಾಡಿಸಲು ಸೂಕ್ತ ಮಾರ್ಗದರ್ಶನ ನೀಡುವುದು. ದಾಖಲಾತಿ ಮಾಡಲು 28.04.2018 ಕೊನೆಯ ದಿನವಾಗಿರುತ್ತದೆ
- ಸೀಟು ಹಂಚಿಕೆಯಾಗುವ ಮೊದಲೇ ಪೋಷಕರು ಹಾಗೂ ಮಗುವಿನ ಎಲ್ಲಾ ದಾಖಲೆಗಳನ್ನು ಇಲಾಖೆಯ ಹಂತದಲ್ಲಿ ಸಂಪೂರ್ಣವಾಗಿ ಪರಿಶೀಲಿಸಿರುವುದರಿಂದ, ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ದಾಖಲೆಗಳನ್ನು ಮರುಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಪೋಷಕರು ನೀಡುವ ಆಧಾರ್ ಕಾರ್ಡನ್ನು ಪೋಷಕರು ಹಾಗೂ ಮಗುವನ್ನು ಗುರುತಿಸಲು ಮಾತ್ರ ಪರಿಗಣಿಸಲು ಈ ಮೂಲಕ ಸೂಚಿಸಿದೆ. ಈ ವಿಚಾರವನ್ನು ಖಾಸಗಿ ಶಾಲೆಗಳ

ಆಡಳಿತ ಮಂಡಳಿಗಳ ಗಮನಕ್ಕೆ ತರಲು ಹಾಗೂ ಸೂಕ್ತ ನಿರ್ದೇಶನವನ್ನು ನೀಡಲು ಈ ಮೂಲಕ ಸೂಚಿಸಿದೆ.

- ಶಾಲಾ ಆಡಳಿತ ಮಂಡಳಿಯು ಆಯಾ ದಿನ ದಾಖಲಾದ ವಿದ್ಯಾರ್ಥಿಗಳ ವಿವರಗಳನ್ನು ಕಡ್ಡಾಯವಾಗಿ ಆನ್ ಲೈನ್ ಮೂಲಕ ಅದೇ ದಿನ ಅಪ್‌ಲೋಡ್ ಮಾಡಲು ಸೂಕ್ತ ನಿರ್ದೇಶನವನ್ನು ನೀಡುವುದು.
- ತಾಲ್ಲೂಕು ಹಂತದಲ್ಲಿ ಒಬ್ಬರು ಸಿಬ್ಬಂದಿಯನ್ನು ಆರ್.ಟಿ.ಇ. ಸಹಾಯವಾಣಿ ಕೇಂದ್ರಕ್ಕೆ ನೇಮಿಸಿ, ಆರ್.ಟಿ.ಇ. ದಾಖಲಾತಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಯನ್ನು ಪೋಷಕರಿಗೆ ನೀಡಲು ಹಾಗೂ ಅವರ ಅಹವಾಲುಗಳಿಗೆ ಸ್ಪಂದಿಸಲು ಕ್ರಮ ವಹಿಸಲು ತಿಳಿಸುವುದು.
- ಪೋಷಕರು ಅರ್ಜಿ ಸಲ್ಲಿಸುವಾಗ ಆದ್ಯತೆ ನೀಡಿರುವ ಶಾಲೆಗಳಿಗೆ ಸೀಟು ಹಂಚಿಕೆಯಾಗಿದ್ದು, ಶಾಲಾ ಬದಲಾವಣೆಗೆ ಯಾವುದೇ ಅವಕಾಶವಿಲ್ಲ ಎಂಬ ಅಂಶವನ್ನು ಪೋಷಕರು ಮನವರಿಕೆ ಮಾಡಿಕೊಡುವುದು, ಇಂತಹ ಪ್ರಕರಣಗಳನ್ನು ಆಯುಕ್ತಾಲಯಕ್ಕೆ ಶಿಫಾರಸ್ಸು ಮಾಡಬಾರದು.
- ಸಲ್ಲಿಸಿರುವ ಅರ್ಜಿಯಲ್ಲಿ ಬದಲಾವಣೆಗೆ ಕೋರಿ (ಜನ್ಮ ದಿನಾಂಕ, ತಂದೆ/ತಾಯಿ ಹೆಸರು, ಪ್ರವರ್ಗ/ಜಾತಿ, ಮಗುವಿನ ಹೆಸರು ಇತ್ಯಾದಿಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.
- ದಾಖಲಾತಿಗೆ ಸಂಬಂಧಿಸಿದಂತೆ ಯಾವುದೇ ಅಡಚಣೆಯಾದಲ್ಲಿ ಇಲಾಖಾ ವೆಬ್ ಸೈಟಿನ ಆರ್.ಟಿ.ಇ. ವಿಭಾಗಕ್ಕೆ ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಯಾವುದೇ ಸಮಸ್ಯೆಗಳು ಬಂದಲ್ಲಿ ತಮ್ಮ ಹಂತದಲ್ಲಿ ಕ್ರಮ ವಹಿಸಲು ಸೂಚಿಸಿದೆ. ಗುರುತರ ಸಮಸ್ಯೆಗಳಿದ್ದಲ್ಲಿ ಕೂಡಲೇ ಈ ಕಛೇರಿ ಗಮನಕ್ಕೆ ತರಲು ಸಹ ತಿಳಿಸಿದೆ.

ಯಾವುದೇ ಗುರುತರ ಸಮಸ್ಯೆಗಳಿದ್ದಲ್ಲಿ ಕೂಡಲೇ ಆರ್.ಟಿ.ಇ.ಗೆ ಇ-ಮೇಲ್ ಮಾಡಿ ಸಮಸ್ಯೆಯನ್ನು ಪರಿಹರಿಸಿಕೊಂಡು ಪೋಷಕರೊಂದಿಗೆ ಸಹಕರಿಸುವಂತೆ ಸೂಚಿಸಿದೆ.

**ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
3. ಕಛೇರಿ ಪ್ರತಿ.